C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
## ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 277/2018

**ಪ್ರಾಸಾ.7 ಚಾಸಾ.14**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮಂಜುನಾಥ್ ಎಮ್.ಕೆ. |
| **ತಂದೆಯ ಹೆಸರು** | : | ಕೇಶವಮೂರ್ತಿ ಎನ್.ಆರ್ |
| **ವಯಸ್ಸು** | : | 33 ವರ್ಷಗಳು |
| **ಉದ್ಯೋಗ** | : | ಇಂಜಿನಿಯರ್ |
| **ವಾಸ** | : | ಪೀಣ್ಯ, ಬೆಂಗಳೂರು. |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 08.08.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತಿಲ್ಲ. ಚಾಸಾ-24 ಶಿವಣ್ಣ ಗೊತ್ತಿಲ್ಲ. ಈಗ ತೋರಿಸಿದ ದಿನಾಂಕ 03.03.2017 ರ ಮಹಜರ್ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ದಾಖಲೆಯನ್ನು ನಿಶಾನೆ ಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-10(ಎ) ಎಂದು ಗುರುತಿಸಲಾಯಿತು.

2. ನಾನು ಸದರಿ ದಾಖಲೆಗೆ ಸುಮಾರು 5 ರಿಂದ 6 ವರ್ಷಗಳ ಹಿಂದೆ ಹಾರೋಹಳ್ಳಿ ಸರ್ಕಲ್ ಇನ್ಸ್‌ಪೆಕ್ಟರ್ ರವರ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರವರು ಸದರಿ ದಾಖಲೆಗೆ ಸಹಿ ಹಾಕಲು ಹೇಳಿದರು, ನಾನು ಅದರಂತೆ ಸಹಿ ಮಾಡಿರುತ್ತೇನೆ. ನಿಶಾನೆ ಪಿ-10 ರಲ್ಲಿ ಬರೆದಿರು

ವಿಚಾರಗಳು ನನಗೆ ಗೊತ್ತಿಲ್ಲ. ಈ ಕೇಸಿನ ಸಂಬಂಧ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಪೊಲೀಸರವರು ನನ್ನನ್ನು ವಿಚಾರಿಸಿರುವುದಿಲ್ಲ. ನಾನು ಅವರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ದಿನಾಂಕ 03.03.2017 ರಂದು ಪೊಲೀಸರವರು ನನ್ನನ್ನು ಮತ್ತು ಚಾಸಾ-24 ಶಿವಣ್ಣರವರನ್ನು ಕಗ್ಗಲೀಪುರ ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರವರು 2 ನೇ ಆರೋಪಿಯನ್ನು ತೋರಿಸಿ, ಆತ ಬೆಂಗಳೂರು ಗಾಂಧಿ ಬಜಾರ್ ಬಳಿ ಸಿಮ್ ಮಾರಾಟ ಮಾಡುವ ಅಂಗಡಿ ಇಟ್ಟುಕೊಂಡಿದ್ದು, ಆತ ಮಂಜುನಾಥ ಎಂಬ ಹೆಸರಿನ ದಾಖಲೆ ಪಡೆದು, ಯಾವುದೇ ದಾಖಲೆಯನ್ನು ಪರಿಶೀಲಿಸದೇ 1 ನೇ ಆರೋಪಿಗೆ ಸಿಮ್ ನ್ನು ನೀಡಿರುತ್ತಾನೆ, 1 ನೇ ಆರೋಪಿ ಸದರಿ ಸಿಮ್ ನ್ನು ಬಳಸಿ, ಮೃತನಿಗೆ ಕರೆ ಮಾಡಿ, ಆತನ ಸ್ನೇಹವನ್ನು ಬೆಳೆಸಿ, ನಂತರ ಮೃತನಿಗೆ ವಿದ್ಯುತ್ ಶಾಖ ಕೊಟ್ಟು ಕೊಲೆ ಮಾಡಿರುತ್ತಾನೆ, 2 ನೇ ಆರೋಪಿ ತನ್ನನ್ನು ಕರೆದುಕೊಂಡು ಹೋದರೆ ಸದರಿ ಸಿಮ್ ಮಾರಾಟ ಮಾಡಿದ ದಾಖಲೆಗಳನ್ನು ತೋರಿಸುವುದಾಗಿ ಒಪ್ಪಿಕೊಂಡಿರುತ್ತಾನೆ, ಆದ್ದರಿಂದ ನೀವು ಪಂಚರಾಗಿ ಬರಬೇಕೆಂದು ತಿಳಿಸಿದರು, ಆಗ ನಾನು ಅದಕ್ಕೆ

ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರವರು, ನಾನು, ಚಾಸಾ–24 ಮತ್ತು 2 ನೇ ಆರೋಪಿ ಗಾಂಧಿ ಬಜಾರ್ ನಲ್ಲಿ ಇರುವ ಯೂನಿವರ್ಸಲ್ ಮೊಬೈಲ್ ಸ್ಟೋರ್ ಗೆ ಹೋದೆವು ಸದರಿ ಸ್ಟೋರ್ ನಲ್ಲಿ 2 ನೇ ಆರೋಪಿ ಸಿಮ್ ಮಾರಾಟವಾದಾಗ ಬರೆದುಕೊಳ್ಳುವ ಪುಸ್ತಕಗಳನ್ನು ಹಾಜರುಪಡಿಸಿ, ಹೆಚ್ಚಿನ ಹಣ ಕೊಟ್ಟ ಕಾರಣ ಸರಿಯಾಗಿ ಆಧಾರ್ ಕಾರ್ಡ್ ನ್ನು ಪರಿಶೀಲಿಸದೇ ಸಿಮ್ ನ್ನು 1 ನೇ ಆರೋಪಿಗೆ ಮಾರಾಟ ಮಾಡಿದೆ ಎಂದು ತಿಳಿಸಿದ. ನಂತರ ಪೊಲೀಸರವರು ಸದರಿ ಎರಡು ಪುಸ್ತಕಗಳನ್ನು ಅಮಾನತು ಪಡಿಸಿಕೊಂಡು ನಿಶಾನೆ ಪಿ–10 ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ.

2. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ದಿನಾಂಕ 03.03.2017 ರಂದು -------------ಕೋರುತ್ತೇನೆ) ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.11 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಮತ್ತು ನಿಶಾನೆ ಪಿ-10 ಮಹಜರ್ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿದ್ದರು ಸಹ ಮತ್ತು ನಿಶಾನೆ ಪಿ-11 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರು ಸಹ, ನಾನು ಈ ದಿವಸ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್ .ಕೆ. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ತಮ್ಮದು ಪಾಟೀ-ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.